ಮಂಡ್ಯ ನಗರದ ಸೀಮೆಎಣ್ಣೆ ಸರಬರಾಜಿನ ಪರಿಸ್ಥಿತಿಯನ್ನು ಈ ಹಿಂದೆ ಇದ್ದಂತೆ, ತುರ್ತಾಗಿ ಸುಧಾರಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಡಾ. ಹೆಗ್ಗಪ್ಪ ಡಿ ಲಮಾಣಿ (ಆಹಾರ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಗೆ ಪ್ರತಿ ತಿಂಗಳು ೧೧ಳಂ ಕಿಲೋ ಲೀಟರ್ ಸೀಮೆಎಣ್ಣೆ ಹಂಚಿಕೆ ಮಾಡಲಾಗುತ್ತಿದೆ. ಈ ಹಂಚಿಕೆಯಲ್ಲಿ ಮಂಡ್ಯ ಪಟ್ಟಣದ ಕಾರ್ಡುದಾರರಿಗೆ ೬ ಲೀ. ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ ೩ ಲೀ.ನಂತೆ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡುತ್ತಾರೆ. ಕಾರ್ಡುದಾರರಿಗೆ ನೀಡಲಾಗುತ್ತಿರುವ ಈ ಪ್ರಮಾಣದಲ್ಲಿ ಯಾವುದೇ ಕಡಿತ ಇರುವುದಿಲ್ಲ. ಸೀಮೆಎಣ್ಣೆ ಎತರಣೆಯನ್ನು ಸುವ್ಯವಸ್ಥಿತಗೊಳಿಸಲಾಗಿದೆ ಹಾಗೂ ಪಡಿತರ ಚೀಟಿಗಳ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ. ಮಂಡ್ಯ, ಪಟ್ಟಣದಲ್ಲಿ ೨೫,೮೦೨ ಪಡಿತರ ಚೀಟಿಗಳಿದ್ದು ಪ್ರತಿ ಕಾರ್ಡಿಗೆ ೬ ಲೀಟರ್‌ನಂತೆ (ಹಾಸ್ಟೆಲ್ಲುಗಳನ್ನೂ ಸೇರಿ) ಎತರಣೆ ಮಾಡಲು ೧೬೪ ಕಿಲೋ ಲೀಟರ್ ಸೀಮೆಎಣ್ಣೆಯನ್ನು ಹಂಚಿಕೆ ಮಾಡಲಾಗಿದೆ.

ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಸೀಮೆಎಣ್ಣೆ ಪ್ರಮಾಣ ತಕ್ಕಷ್ಟು ಆಗಿರುವುದಿಲ್ಲ. ಪ್ರತಿ ತಿಂಗಳಿಗೆ ೬೭,೦೦೦ ಕಿಲೋ ಲೀಟರ್ ಸೀಮೆಎಣ್ಣೆ ಎತರಣೆ ಅವಶ್ಯಕವಿದ್ದು, ಇದಕ್ಕೆದುರಾಗಿ ಕೇವಲ ೪೭,೫೧೩ ಕಿಲೋ ಲೀಟರ್ ಮಾತ್ರ ಕೇಂದ್ರ ಸರ್ಕಾರದಿಂದ ಹಂಚಿಕೆ ಆಗುತ್ತಲಿದೆ. ಆದುದರಿಂದ ಜಿಲ್ಲೆಗಳು ಸಾಕಷ್ಟು ಪ್ರಮಾಣದ ಸೀಮೆಎಣ್ಣೆಯನ್ನು ಪಡೆಯುತ್ತಿಲ್ಲ. ೧೯೯೧ ರ ನವೆಂಬರ್ ತಿಂಗಳಿನಿಂದ ರಾಜ್ಯಕ್ಕೆ ಒಂದೇ ಪ್ರಮಾಣದ ಹಂಚಿಕೆಯಾಗುತ್ತಿದ್ದು, ಯಾವುದೇ ಬದಲಾವಣೆ ಇಲ್ಲ. ಆದರೆ ಪಡಿತರ ಚೀಟಿಗಳು ಹೆಚ್ಚಿಗೆ ಆಗುತ್ತಲಿವೆ. ಆದುದರಿಂದ ರಾಜ್ಯದಲ್ಲಿ ಸೀಮೆಎಣ್ಣೆ ಕೊರತೆ ಉಂಟು. ಸೀಮೆಎಣ್ಣೆಯ ಹಂಚಿಕೆ ಪ್ರಮಾಣವನ್ನು ಹೆಚ್ಚಿಸುವಂತೆ ಕೇಂದ್ರಕ್ಕೆ ರಾಜ್ಯ ಸರ್ಕಾರವು ಮೇಲಿಂದ ಮೇಲೆ ಮನವಿ ಮಾಡುತ್ತಲೇ ಇದೆ.

(೫) ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ಗ್ರಾಮಗಳಲ್ಲಿ ವಿದ್ಯುತ್ ಅಭಾವ.

ಶ್ರೀ ಎಂ.ಮಲ್ಲಿಕಾರ್ಜುನ (ಕನಕಗಿರಿ):- ಮಾನ್ಯ ಅಧ್ಯಕ್ಷರೇ, ಗಂಗಾವತಿ ತಾಲ್ಲೂಕು ಹಾಗೂ ಕನಕಗಿರಿ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಅಭಾವದಿಂದ ರೈತರು ಸಾಕಷ್ಟು ಕಂಗಾಲಾಗಿ, ಬೆಳೆದ ಬೆಳೆ ಬಾರದೇ ಒಣಗಿ ಹೋಗುತ್ತಿದೆ. ಪೈರಿನಲ್ಲಿ ಒಂದಂಶವಾದರೂ ರೈತರಿಗೆ ಸಿಗುತ್ತಿಲ್ಲ. ಈ ವಿಷಯದಲ್ಲಿ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಓಂಪ್ರಕಾಶ್ ಕಣಗಲಿ(ನೀರಾವರಿ ರಾಜ್ಯ ಸಚಿವರು) (ಉಪ ಮುಖ್ಯಮಂತ್ರಿಗಳ ಪರವಾಗಿ):- ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ಗ್ರಾಮಗಳಲ್ಲಿ ಸ್ವಲ್ಪ ದಿನಗಳ ಹಿಂದೆ ವಿದ್ಯುತ್ ಸರಬರಾಜಿನಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಯ ಉಂಟಾಗಿತ್ತು. ಇದಕ್ಕೆ ಮುಖ್ಯ ಕಾರಣ, ಗಂಗಾವತಿಯಲ್ಲಿರುವ ೧೧೦:೧೧ ಕೆ.ವಿ.ಉಪ ವಿದ್ಯುತ್ ಕೇಂದ್ರದಲ್ಲಿರುವ ಪವರ್ ಟ್ರಾನ್ಸ್‌ಫಾರ್ಮರ್‌ಗಳು 'ಓವರ್ ಲೋಡ್ ಆಗುತ್ತಿದ್ದರಿಂದ ಓವರ್‌ಲೋಡನ್ನು ತಪ್ಪಿಸಲು ಅನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸಬೇಕಾಯಿತು. ಆದರೆ ಈಗ ಈ ಕ್ಷೇತ್ರದ ಕೆಲವು ಗ್ರಾಮಗಳಿಗೆ ಕರಟಗಿಯಲ್ಲಿರುವ ೧೧೦:೧೧ ಕೆ.ವಿ. ಉಪ ವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ, ಗಂಗಾವತಿಯಲ್ಲಿರುವ ೧೧೦:೧೧ಕೆ.ವಿ.ಉಪ ವಿದ್ಯುತ್ ಕೇಂದ್ರದ ಟ್ರಾನ್ಸ್‌ಫಾರ್ಮರ್‌ಗಳ ಓವರ್ ಲೋಡ್ ಆಗುವಿಕೆಯನ್ನು ತಪ್ಪಿಸಲಾಗಿದೆ. ಹೀಗಾಗಿ ವಿದ್ಯುತ್ ಸರಬರಾಜಿನ ಅಡಚಣೆಯ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ. ಅಲ್ಲದೇ ಗಂಗಾವತಿಯಲ್ಲಿರುವ ೧೧೦:೧೧ ಕೆ.ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಇನ್ನು ಐದು ಹೊಸ ೧೧ ಕೆ.ವಿ. ಫೀಡರುಗಳನ್ನು ಹಾಕಿ ಲೋಡನ್ನು

ವಿಭಾಗಿಸಲಾಗಿದ್ದು, ಎಲ್ಲಾ ೧೧ ಕೆ.ವಿ. ಫೀಡರುಗಳ ಮೇಲಿನ ಲೋಡನ್ನು ಕಡಿಮೆಗೊಳಿಸಿರುವುದರಿಂದ ಓವರ್ ಲೋಡ್‌ನಿಂದಾಗಿ ಆಗುತ್ತಿದ್ದ ವಿದ್ಯುತ್ ಅಡಚಣೆಯೂ ಕಡಿಮೆಯಾಗಿದೆ.

ರಾಜ್ಯಾದ್ಯಂತ ಸೆಪ್ಟಂಬರ್ ೯೨ ರಿಂದ ಜಾರಿಯಲ್ಲಿರುವ ದಿನವಹಿ ೬ ಗಂಟೆಗಳ ನಿಯಮಿತ ಲೋಡ್ ಶೆಡ್ಡಿಂಗ್ ಮಂಡಳಿಯ ಗಂಗಾವತಿ ವಿಭಾಗದಲ್ಲೂ ಜಾರಿಯಲ್ಲಿದೆ. ಸಧ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ.

ಕನಕಗಿರಿ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿಸಲು, ಕನಕಗಿರಿಯಲ್ಲಿ ಒಂದು ೩೩/೧೧ ಕೆ.ವಿ.ಉಪ ವಿದ್ಯುತ್ ಕೇಂದ್ರವನ್ನು ಮಂಡಳಿಯು ನಿರ್ಮಾಣ ಮಾಡುತ್ತಿದೆ. ಇದಕ್ಕಾಗಿ ಗಂಗಾವತಿಯಿಂದ ಕನಕಗಿರಿಗೆ ಸುಮಾರು೨೦ ಕಿ.ಮಿ.ಉದ್ದದ ೩೩ ಕೆ.ವಿ.ವಿದ್ಯುತ್ ಲೈನನ್ನು ನಿರ್ಮಾಣ ಮಾಡಲಾಗುತ್ತಿದೆ. ಈ ಉದ್ದೇಶಿತ೩೩/೧೧ ಕೆ.ವಿ.ಉಪ ವಿದ್ಯುತ್ ಕೇಂದ್ರದಲ್ಲಿ ೫ ಎಂ.ವಿ.ಎ. ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ೩೦ ಲಕ್ಷ ರೂ.ಈ ಸಾಲಿನ (೧೯೯೨-೯೩)ರ ಆಯವ್ಯಯದಲ್ಲಿ ೧೦ ಲಕ್ಷ ರೂ. ಒದಗಿಸಲಾಗಿದೆ. ನಿರ್ಮಾಣ ಕಾರ್ಯವನ್ನು ಮಾರ್ಚ್ ೯೪ ರ ಅಂತ್ಯದಲ್ಲಿ ಪೂರ್ಣಗೊಳಿಸಲು ಗುರಿ ಹೊಂದಿದೆ.

ಅಲ್ಲದೇ, ಗಂಗಾವತಿಯಲ್ಲಿರುವ ೧೧೦ ಕೆ.ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಒಂದು ೧೦ ಎಂ.ವಿ.ಎ. ಸಾಮರ್ಥ್ಯದ ೧೧೦/೩೩ ಕೆ.ವಿ.ಪವರ್ ಟ್ರಾನ್ಸ್‌ಫಾರ್ಮರನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಉದ್ದೇಶಿಸಿದ್ದು, ಈ ಕಾರ್ಯವನ್ನೂ ಸಹ ಮಾರ್ಚ್ ೯೪ರ' ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಗುರಿ ಹೊಂದಿದೆ. ಸದರೀ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು ೧೨೦ ಲಕ್ಷ ರೂ.ಈ ಸಾಲಿನ (೧೯೯೨-೯೩) ಆಯವ್ಯಯದಲ್ಲಿ ೧೦ ಲಕ್ಷ ರೂ.ಒದಗಿಸಲಾಗಿದೆ.

(೬): ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೬ ಕ್ಕೆ ಇಳಿಸುವ ಬಗ್ಗೆ ಸರ್ಕಾರದ ನಿಲುವು.

ಶ್ರೀ. ಶಿವಾನಂದ ಹೆಚ್. ಕೌಜಲಗಿ:- (ಬೈಲಹೊಂಗಲ): ಮಾನ್ಯ ಅಧ್ಯಕ್ಷರೇ:- ಶ್ರೀ ವೀರೇಂದ್ರಪಾಟೀಲ್ ಮುಖ್ಯ ಮಂತ್ರಿಗಳಾಗಿದ್ದಾಗ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೬ ಕ್ಕೆ ಇಳಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದರು. ನಂತರ ಮತ್ತೆ ಒಂದು ವರ್ಷ ಈಗಿದ್ದ ಸ್ಥಿತಿಯನ್ನೇ ಮುಂದುವರಿಸಲಾಗಿದೆಯೆಂದು ತಿಳಿಸಲಾಯಿತು.

ಹೋದ ವಿಧಾನಸಭಾಧಿವೇಶನದಲ್ಲಿ ಈ ಬಗ್ಗೆ ಇನ್ನೂ, ನಿರ್ಣಯ ತೆಗೆದುಕೊಂಡಿರುವುದಿಲ್ಲ ಎಂದು ತಿಳಿಸಲಾಯಿತು. ಆದರೆ ಮೊನ್ನೆ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದವರು ಇದರ ಬಗ್ಗೆ ಯಾವುದೇ ಪ್ರಸ್ತಾವನೆಯನ್ನು ಮಾಡಿರುವುದಿಲ್ಲ. ಹೀಗಾಗಿ ನೌಕರರು ತ್ರಿಶಂಕು ಸ್ಥಿತಿಯಲ್ಲಿರುವರು. ಆದಕಾರಣ, ಸರ್ಕಾರದವರು ಈಗಿರುವ ನಿಯಮಗಳಂತೆ ನೌಕರರ ನಿವೃತ್ತ ವಯಸ್ಸನ್ನು ೫೮ ವರ್ಷಗಳವರೆಗೆ ಮುಂದುವರಿಸುವಿರೋ ಅಥವಾ ಕಡಿಮೆ ಮಾಡುವರೋ ಎಂಬುದನ್ನು ತಿಳಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):- ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಮಾನ್ಯ ರಾಜ್ಯಪಾಲರು ವಿಧಾನ ಮಂಡಲದ ಎರಡು ಸದನಗಳನ್ನುದ್ದೇಶಿಸಿ ದಿನಾಂಕ ೧೩-೮-೧೯೯೦ ರಂದು ಮಾಡಿದ ಭಾಷಣದಲ್ಲಿ ಸರ್ಕಾರಿ ನೌಕರರ ನಿವೃತ್ತ ವಯಸ್ಸನ್ನು ೫೮ ರಿಂದ ೫೫ ವರಗೆಇಳಿಸಬೇಕೆಂದು ಬಹಳಷ್ಟು ಮನವಿಗಳು, ನಿರುದ್ಯೋಗಿಯುವಕರುಗಳಿಂದ